O.S .No. 384/2012

ಪಿ.ಡಬ್ಲ್ಯೂ-1

ದಿನಾಂಕ: 06.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ. ವಕೀಲರಿಂದ

ದಾವಾ ಆಸ್ತಿ ಮೂಲತಃ ಕಾಳೇಗೌಡ ಬಿನ್ ಹುಚ್ಚೇಗೌಡರಿಗೆ ಮಂಜೂರಾಗಿರುತ್ತದೆ. ದಾವಾ ಆಸ್ತಿ ಮೂಲತಃ ಕಾಳೇಗೌಡ ಬಿನ್ ಹುಚ್ಚೇಗೌಡರಿಗೆ ಮಂಜೂರಾಗಿತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಪಿ-1 ರಿಂದ 28 ದಾಖಲಾತಿಗಳನ್ನು ತೋರಿಸಿ, ಅದರಲ್ಲಿ ಮಂಜೂರಾತಿ ಪತ್ರವನ್ನು ಗುರುತಿಸುವಂತೆ ಕೇಳಿದ್ದು, ಸಾಕ್ಷಿ ನಿಪಿ-15 ರಂತೆ ಮಂಜೂರಾಗಿದೆ ಎಂದು ಹೇಳುತ್ತಾರೆ. ನಿಪಿ-15 ಸರ್ಕಾರಿ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ನಿಪಿ-15 ನ್ನು ಹೊರತುಪಡಿಸಿ ಹುಚ್ಚೇಗೌಡ ಬಿನ್ ಕಾಳೇಗೌಡ ಎಂದು ನಮೂದಾಗಿರುವ ಬೇರೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಕ್ರಯ ಪತ್ರ ಇದೆ ಎಂದು ಹೇಳುತ್ತಾರೆ. ನಿಪಿ-20 ರಂತೆ ಕ್ರಯ ಪತ್ರದಲ್ಲಿ ಕಾಳೇಗೌಡ ಬಿನ್ ಹುಚ್ಚೇಗೌಡ ಎಂದು ಸೃಷ್ಟಿಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ದಾವೆ ನ್ಯಾಯಾಲಯದ ಮುಂದೆ ದಿಃ 30.01.2020 ರಂದು ಡಿಕ್ರಿಯಾದ ಕಾಲಕ್ಕೆ ನೀವೇ ಸಾಕ್ಷ್ಯವನ್ನು ನುಡಿದಿರುತ್ತೀರಿ ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಗೊತ್ತು ಎಂದರೆ ಸರಿ. ದಿಃ 21.11.2023 ರಂದು ಮೇಲ್ಮನವಿ ತೀರ್ಮಾನವಾಗಿ ಈ ನ್ಯಾಯಾಲಯದಲ್ಲಿ ಪುನರ್ ಸ್ಥಾಪಿಸಿದ ವಿಚಾರ ಗೊತ್ತಿದೆ ಎಂದರೆ ಸರಿ. ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದ ವಿಚಾರ ನಿಮಗೆ ಗೊತ್ತಿದ್ದರೂ ಸಹ ನೀವು ತಹಶೀಲ್ದಾರ ಕಚೇರಿಯಲ್ಲಿ ಖಾತೆ ಮಾಡಲು ಅರ್ಜಿ ನೀಡಿರುತ್ತೀರಿ ಎಂದರೆ ಸಾಕ್ಷಿ ಡಿಕ್ರಿಯಾಗಿ ಸುಮಾರು ತಿಂಗಳು ಕಳೆದ ನಂತರ ಅರ್ಜಿ ನೀಡಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕ ನೆನಪಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ದಿಃ 27.09.2023 ರಂದು ಖಾತೆ ಮಾಡುವಂತೆ ಅರ್ಜಿ ನೀಡಿರುತ್ತೀರಿ ಎಂದರೆ ಸರಿ. ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದರೂ, ಸುಳ್ಳು ಮಾಹಿತಿ ನೀಡಿ, ಅರ್ಜಿ ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಅರ್ಜಿ ಸಲ್ಲಿಸುವ ಕಾಲಕ್ಕೆ ಮೇಲ್ಮನವಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಾಕ್ಷಿಗೆ ಅರ್ಜಿಯನ್ನು ತೋರಿಸಿದ್ದು, ಸಾಕ್ಷಿ ಅದನ್ನು

ನೋಡಿ ಗುರುತಿಸಿದ್ದು, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನೀವು ನ್ಯಾಯಾಲಯದಲ್ಲಿ ಮೇಲ್ಕಾಣಿಸಿದ ಚಾಲ್ತಿಯಲ್ಲಿದ್ದ ಕಾಲಕ್ಕೆ ಸುಳ್ಳು ಮಾಹಿತಿ ನೀಡಿ, ಖಾತೆ ಮಾಡುವಂತೆ ಅರ್ಜಿ ನೀಡಿರುತ್ತೀರಿ ಎಂದರೆ ಸರಿಯಲ್ಲ.

ಸಾಕ್ಷಿಗೆ ಎಂ.ಆರ್.10/2023-24 ರ ಮುಟೇಶನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಂತೆ ಸುಳ್ಳು ಮಾಹಿತಿ ನೀಡಿ ಖಾತೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಕಾಳೇಗೌಡ ಬಿನ್ ಹುಚ್ಚೇಗೌಡರಿಗೆ ದಾವಾ ಆಸ್ತಿ ಸರ್ಕಾರದಿಂದ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮಾವ ಕಾಳೇಗೌಡರಿಗೆ ಮಂಜೂರಾದ ಆಸ್ತಿಯನ್ನು, ಕಾಳೇಗೌಡ ಬಿನ್ ಹುಚ್ಚೇಗೌಡ ಎಂದು ಸೇರಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಕಾಳೇಗೌಡ ಬಿನ್ ಹುಚ್ಚೇಗೌಡರ ಹೆಸರಿಗೆ ದುರಸ್ತು ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯ ಮಾವನ ಹೆಸರಿಗೆ ದುರಸ್ತು ಆಗಿ ಸ.ನಂ.22 ರಿಂದ ರಿ.ಸ.ನಂ. 68 ಎಂದು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಕಾಳೇಗೌಡ ಬಿನ್ ಹುಚ್ಚೇಗೌಡ ಎಂಬುವವರಿಗೆ ಸ.ನಂ.68 ದುರಸ್ತು ಆದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ಅಭಿವೃದ್ಧಿಪಡಿಸಿದ್ದು, ನೀವು ಕಾಳೇಗೌಡ ಬಿನ್ ಹುಚ್ಚೇಗೌಡರಿಂದ ಮುಖ್ತಾರನಾಮೆ ಪಡೆದು, ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಯಾರು ಸ್ವಾಧೀನದಾರರು ಭೂಮಿಯನ್ನು ಉಳುಮೆ ಮಾಡಿ ಅಭಿವೃದ್ಧಿಪಡಿಸುತ್ತಾರೋ, ಅಂತಹವರಿಗೆ ಜಮೀನು ಮಂಜೂರು ಮಾಡಲಾಗುತ್ತದೆಂದರೆ ಸರಿ. ಕಾಳೇಗೌಡ ಬಿನ್ ಹುಚ್ಚೇಗೌಡ ರವರಿಗೆ ಯಾವಾಗ ಮಂಜೂರಾಯಿತು ಎಂದರೆ ಸಾಕ್ಷಿ 1956-57 ರಲ್ಲಿ ಎಂದು ಹೇಳುತ್ತಾರೆ. 1956-57 ರಲ್ಲಿ ಕಾಳೇಗೌಡ ಬಿನ್ ಹುಚ್ಚೇಗೌಡ ಎಂಬುವವರು ಕೆ.ಆರ್,ನಗರ ತಾಲ್ಲೂಕು, ಚೀರನಹಳ್ಳಿಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ದಾವೆಗಾಗಿ ದಾಖಲಾತಿಗಳನ್ನು ಚೀರನಹಳ್ಳಿಯ ಕಾಳೇಗೌಡ ಬಿನ್ ಹುಚ್ಚೇಗೌಡ ಎಂದು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಹಾಗೂ ವಾದಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಪ್ರತಿವಾದಿಗಳ ಆಸ್ತಿಯನ್ನುಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನೀವು ಉಳುಮೆ

ಮಾಡುತ್ತಿರುವುದನ್ನು ನೋಡಿ ಸಾಕ್ಷ್ಯ ಹೇಳುವವರು ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿಃ ಪೂರ್ವಕ್ಕೆಃ ಹೊನ್ನೇಗೌಡ ದಕ್ಷಿಣಕ್ಕೆಃ ಶಿವಮ್ಮ ರವರ ಜಮೀನು. ಸದರಿ ಹೊನ್ನೇಗೌಡ ಮತ್ತು ಶಿವಮ್ಮ ರವರನ್ನು ಸಾಕ್ಷಿಯಾಗಿ ಸಾಕ್ಷ್ಯ ನುಡಿಯಲು ಕರೆದುಕೊಂಡು ಬರಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಹೊನ್ನೇಗೌಡ ಮೃತಪಟ್ಟಿದ್ದು, ಅವರ ಮಕ್ಕಳನ್ನು ಕರೆದುಕೊಂಡು ಬಂದು ಸಾಕ್ಷ್ಯ ನುಡಿಸುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ನೀವು ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯ ಸ್ವಾಧೀನ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4, 20 ಮತ್ತು 21 ದಾಖಲಾತಿಗಳನ್ನು ದಾವೆಗೊಸ್ಕರ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಪಹಣಿಗಳು ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.